# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | **71 (609)** |
| 2 ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ<br>( ವಿಧಾನ ಸಭೆಯಿಂದ ಚುನಾಯಿತರಾದವರು) |
| 3 ಉತ್ತರಿಸುವ ದಿನಾಂಕ | : | 13/12/2024 |
| 4 ಉತ್ತರಿಸುವ ಸಚಿವರು | : | ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ ಅಭಿವೃದ್ಧಿ ಮಂಡಳಿ ಜಾರಿಗೆ ಬರುವುದು ಯಾವಾಗ; ಈ ಬಗ್ಗೆ ತೆಗೆದುಕೊಂಡ ಕ್ರಮವೇನು; 2022-23, 2023-24 ಮತ್ತು 2024-25 ರಲ್ಲಿ ಎಷ್ಟು ಅನುದಾನವನ್ನು ಪ್ರಾಧಿಕಾರ ಮೂಲಕ ಖರ್ಚು ಮಾಡಿದೆ; (ವಿವರ ನೀಡುವುದು) | ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಕರಾವಳಿ ಅಭಿವೃದ್ಧಿ ಮಂಡಳಿಯಾಗಿ ಪರಿವರ್ತಿಸಲು ಕಾಯ್ದೆಯನ್ನು ರೂಪಿಸಲಾಗಿದ್ದು, ಸದರಿ ಕಾಯ್ದೆಗೆ ಘನತೆವೆತ್ತ ರಾಜ್ಯಪಾಲರು ಸಹಿ ಹಾಕಿದ್ದು, ದಿನಾಂಕ:10.06.2024 ರಂದು ರಾಜ್ಯ ಸರ್ಕಾರವು ಅಧಿಕೃತ ವಾಗಿ ಗೆಜೆಟ್ ನೋಟಿಫಿಕೇಶನ್‌ನಲ್ಲಿ ಪ್ರಕಟಿಸಲಾಗಿದೆ. ಪ್ರಸ್ತುತ ನಿಯಮಗಳನ್ನು ರೂಪಿಸಲಾಗಿದ್ದು, ಕಡತವು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಲ್ಲಿ ಪರಿಶೀಲನಾ ಹಂತದಲ್ಲಿದೆ(ಕಡತ ಸಂಖ್ಯೆ:ಪಿಡಿಎಸ್ 56 ಪಿಟಿಪಿ 2021).<br>2024-25ನೇ ಸಾಲಿನ ಆಯವ್ಯಯದಲ್ಲಿ ಪ್ರಾಧಿಕಾರ ಎಂದು ಅನುದಾನ ನಿಗಧಿಪಡಿಸಿದ್ದರಿಂದ ಪ್ರಸ್ತುತ ಪ್ರಾಧಿಕಾರವೆಂದು ಪರಿಗಣಿಸಲಾಗಿದ್ದು, ದಿನಾಂಕ:01.04.2025 ರಿಂದ ಪ್ರಾಧಿಕಾರದ ಬದಲು ಕರಾವಳಿ ಅಭಿವೃದ್ಧಿ ಮಂಡಳಿಯಾಗಿ ಕಾರ್ಯ ನಿರ್ವಹಿಸಲು ಕ್ರಮವಹಿಸಲಾಗಿದೆ.<br>2022-23, 2023-24 ಮತ್ತು 2024-25 ರಲ್ಲಿ ನಿಗದಿಪಡಿಸಲಾಗಿದ್ದ ಅನುದಾನ ಮತ್ತು ಖರ್ಚುಮಾಡಿದ ಅನುದಾನದ ವಿವರ ಈ ಕೆಳಕಂಡಂತಿವೆ. |

**(ರೂ.ಲಕ್ಷಗಳಲ್ಲಿ)**

| ಕ್ರ. ಸಂ | ವರ್ಷ | ಯೋಜನೆ | ನಿಗಧಿತ ಅನುದಾನ | ಬಿಡುಗಡೆ ಯಾದ ಅನುದಾನ | ವೆಚ್ಚ |
|---|---|---|---|---|---|
| 1 | 2022-2023 | ಸಾಮಾನ್ಯ | 2578.25 | 2578.25 | 2648.35 |
| | | ಎಸ್.ಸಿ.ಪಿ | 300.13 | 300.13 | 202.97 |
| | | ಟಿ.ಎಸ್.ಪಿ | 121.62 | 121.62 | 76.98 |
| | | **ಒಟ್ಟು** | **3000.00** | **3000.00** | **2928.30** |
| 2 | 2023-2024 | ಸಾಮಾನ್ಯ | 796.95 | 796.95 | 616.83 |
| | | ಎಸ್.ಸಿ.ಪಿ | 180.08 | 180.08 | 39.20 |
| | | ಟಿ.ಎಸ್.ಪಿ | 72.97 | 72.97 | 13.98 |
| | | **ಒಟ್ಟು** | **1050.00** | **1050.00** | **670.01** |
| 3 | 2024-2025 (Oct 2024 ರ ಅಂತ್ಯಕ್ಕೆ) | ಸಾಮಾನ್ಯ | 796.95 | 398.48 | 266.97 |
| | | ಎಸ್.ಸಿ.ಪಿ | 180.08 | 90.04 | 77.28 |
| | | ಟಿ.ಎಸ್.ಪಿ | 72.97 | 36.48 | 44.25 |
| | | **ಒಟ್ಟು** | **1050.00** | **525.00** | **388.50** |

*ಸಹಾಯಯನುದಾನವನ್ನು ಹೊರತುಪಡಿಸಿ*

| | | |
|---|---|---|
| ಆ) | ಯೋಜನೆಯಲ್ಲಿ ಇಲಾಖೆ ಅಡಿಯಲ್ಲಿ ಬರುವ ಮಂಡಳಿಗಳಿಗೆ ಮಂತ್ರಿಗಳು ತಮ್ಮ "ವಿವೇಚನಾ ನಿಧಿಯನ್ನು " ಎಷ್ಟು ಬಳಕೆ ಮಾಡಿದ್ದಾರೆ; ಯಾವ ಯಾವ ಯೋಜನೆಗಳಿಗೆ ಖರ್ಚು ಮಾಡಲಾಗಿದೆ; (ವಿವರ ನೀಡುವುದು) | ಯೋಜನಾ ಇಲಾಖೆಯಲ್ಲಿ ಬರುವ ಕರಾವಳಿ ಅಭಿವೃದ್ಧಿ ಪ್ರಾಧಿಕಾರ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ, ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗಳಲ್ಲಿ ಸರ್ಕಾರದ ವಿವೇಚನಾ ನಿಧಿಯಡಿ ಶೇ.5ರಷ್ಟು ಅನುದಾನವನ್ನು ಬಳಸಲು ಅವಕಾಶ ಕಲ್ಪಿಸಿದ್ದು, ಕರಾವಳಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿವೇಚನಾ ನಿಧಿಯಡಿ ಬಳಕೆ ಮಾಡಿರುವ ಯೋಜನೆಗಳ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಇ) | ಯೋಜನಾ ಇಲಾಖೆಯ ಅಧೀನದಲ್ಲಿ ಎಲ್ಲಾ ಮಂಡಳಿಗಳಲ್ಲಿ ಬಾಕಿ/ಬಳಕೆ ಆಗದೇ ಇರುವ ನಿಧಿಯಲ್ಲಿ ದುರುಪಯೋಗವಾಗಿದೆ ಮತ್ತು ನಿಧಿಯನ್ನು ಕಾನೂನು ಬಾಹಿರವಾಗಿ ಬಳಕೆ ಮಾಡಲಾಗಿದೆ ಎಂಬ ದೂರಗಳಿದ್ದು, ಈ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮವೇನು; (ವಿವರ ನೀಡುವುದು) | ಯೋಜನಾ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಮಂಡಳಿಗಳಲ್ಲಿ ಬಾಕಿ ಬಳಕೆಯಾಗದ ನಿಧಿಯಲ್ಲಿ ದುರುಪಯೋಗವಾಗಿರುವ ಬಗ್ಗೆ ಈವರೆಗೆ ಯಾವುದೇ ದೂರುಗಳು ಸರ್ಕಾರಕ್ಕೆ ಸ್ವೀಕೃತವಾಗಿಲ್ಲ ಹಾಗೂ ಯಾವುದೇ ನಿಧಿಯನ್ನು ಕಾನೂನು ಬಾಹಿರವಾಗಿ ಬಳಕೆ ಮಾಡಲು ಅವಕಾಶ ಕಲ್ಪಿಸಿರುವುದಿಲ್ಲ. |
| ಈ) | ಯೋಜನಾ ಇಲಾಖೆಯಲ್ಲಿ ಮಂಡಳಿಗೆ ನೀಡಲಾಗುವ ಅನುದಾನವನ್ನು ವಿತರಿಸಲು ಇರುವ ಮಾನ ದಂಡಗಳೇನು? (ವಿವರ ನೀಡುವುದು) | ಯೋಜನಾ ಇಲಾಖೆಯಲ್ಲಿ ಮಂಡಳಿಗೆ ನೀಡುವ ಅನುದಾನವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಡಾ\|\| ಡಿ.ಎಂ ನಂಜುಂಡಪ್ಪ ವರದಿಯ ಸೂಚ್ಯಾಂಕದಂತೆ ಹಂಚಿಕೆ ಮಾಡಲಾಗುವುದು. ಇತರೆ ಮಂಡಳಿಗಳಲ್ಲಿ ನಿಗದಿತ ಅನುದಾನವನ್ನು ಎಲ್ಲಾ ಶಾಸಕರುಗಳಿಗೆ ಸಮನಾಗಿ ಹಂಚಿಕೆ ಮಾಡಲಾಗುತ್ತದೆ. |

ಸಂಖ್ಯೆ: ಪಿಡಿಎಸ್/117 /ಪಿಟಿಪಿ/2024

**(ಡಿ.ಸುಧಾಕರ್ )**

## ಅನುಬಂಧ -1

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಕಾಮಗಾರಿಯವಿವರ | ಅಂದಾಜು ಮೊತ್ತ |
|---|---|---|
| **2021-22** | | |
| 1 | ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕು ಕೋಟತಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ಜನತಾ ಫಿಶ್ ಮಿಲ್ ಬಳಿ ಸ್ಮಶಾನ ಎದುರಿನ ರಸ್ತೆ ಮತ್ತು ಚರಂಡಿ ಅಭಿವೃಧಿ | 22.30 |
| 2 | ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕು ಕೋಟತಟ್ಟು ಗ್ರಾಮ ಪಂಚಾಯತ್ ವ್ಯಾಪ್ತಿಯ ಸರ್ಕಾರಿ ಜೂನಿಯರ್ ಕಾಲೇಜ್ ಹಿಂಭಾಗದ ರಸ್ತೆ ಕಾಂಕ್ರೀಟೀಕರಣ ಕಾಮಗಾರಿ | 22.35 |
| **2022-23ನೇ ಸಾಲಿನಲ್ಲಿ ಸರ್ಕಾರದ ವಿಚೇಚನಾ ಕೋಟದಡಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳಲಾಗಿರುವುದಿಲ್ಲ.** | | |
| **2023-24** | | |
| 1 | ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ವಿಧಾನಸಭಾ ಕ್ಷೇತ್ರದ ಶಿರ್ತಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಿರ್ತಾಡಿ ಎಂಬಲ್ಲಿ ಸುಸಜ್ಜಿತ ಬಸ್ ನಿಲ್ದಾಣ ಕಾಮಗಾರಿ (ಹಂತ 1) | 40.00 |
| 2 | ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ವಿಧಾನಸಭಾ ಕ್ಷೇತ್ರದ ಶಿರ್ತಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಶಿರ್ತಾಡಿ ಎಂಬಲ್ಲಿ ಸುಸಜ್ಜಿತ ಬಸ್ ನಿಲ್ದಾಣ ಕಾಮಗಾರಿ (ಹಂತ 2) | 40.00 |
| **2024-25** | | |
| 2024-25 ನೇ ಸಾಲಿನಲ್ಲಿ ಸರ್ಕಾರದ ವಿವೇಚನಾ ಕೋಟಕ್ಕೆ ರೂ.52.50 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಇನ್ನೂ ಯಾವುದೇ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿರುವುದಿಲ್ಲ. | | |